ಕರ್ನಾಟಕ ಶಿಕ್ಷಣ ಅಧಿನಿಯಮ, 1983 (1995ರ ಕರ್ನಾಟಕ ಅಧಿನಿಯಮ 1)ರ 145ನೇ ಪ್ರಕರಣದ (1)ನೇ ಉಪ–ಪ್ರಕರಣವು ಪ್ರದತ್ತಗೊಳಿಸಿದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕಾಲೇಜು ಶಿಕ್ಷಣ) ನಿಯಮಗಳು, 2003ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಉದ್ದೇಶಿಸಿರುವುದರಿಂದ ಈ ಮುಂದಿನ ನಿಯಮಗಳ ಕರಡನ್ನು ಸದರಿ ಅಧಿನಿಯಮದ 145ನೇ ಪ್ರಕರಣದ (1) ನೇ ಉಪ–ಪ್ರಕರಣವು ಅಗತ್ಯಪಡಿಸಿದಂತೆ, ಅಧಿಸೂಚನೆ ಸಂ: ಇಡಿ 05 ಯುಪಿಸಿ 2014, ದಿನಾಂಕ: 26.07.2014ರಲ್ಲಿ, ಅದರಿಂದ ಬಾಧಿತರಾಗಬಹುದಾದ ಯಾರೇ ವ್ಯಕ್ತಿಗಳಿಂದ, ಸದರಿ ಕರಡು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸಲ್ಲಿಸುವಂತೆ ಕೋರಿ ಪ್ರಕಟಿಸಿರುವುದರಿಂದ;

ಸದರಿ ರಾಜ್ಯಪತ್ರವು, 26–07–2014ರಿಂದ ಸಾರ್ವಜನಿಕರಿಗೆ ಲಭ್ಯವಾಗುತ್ತಿರುವುದರಿಂದ;

ಮತ್ತು ಸ್ವೀಕರಿಸಲಾದ ಆಕ್ಷೇಪಣೆ ಹಾಗೂ ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸಿರುವುದರಿಂದ;

ಪ್ರಸ್ತುತ, ಕರ್ನಾಟಕ ಶಿಕ್ಷಣ ಅಧಿನಿಯಮ, 1983 (1995ರ ಕರ್ನಾಟಕ ಅಧಿನಿಯಮ ಸಂಖ್ಯೆ: 1)ರ 145ನೇ ಪ್ರಕರಣದ (1)ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕಾಲೇಜು ಶಿಕ್ಷಣ) ನಿಯಮಗಳು, 2003ನ್ನು ಮತ್ತಷ್ಟು ತಿದ್ದುಪಡಿ ಮಾಡಲು, ಈ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:–

ನಿಯಮಗಳು

1. **ಹೆಸರು ಮತ್ತು ಪ್ರಾರಂಭ:–** (1) ಈ ನಿಯಮಗಳನ್ನು, ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕಾಲೇಜು ಶಿಕ್ಷಣ) (ತಿದ್ದುಪಡಿ) ನಿಯಮಗಳು, 2014 ಎಂದು ಕರೆಯತಕ್ಕದ್ದು.

(2) ಇವು, ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. 8ನೇ ನಿಯಮದ ತಿದ್ದುಪಡಿ:–ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕಾಲೇಜು ಶಿಕ್ಷಣ) ನಿಯಮಗಳು, 2003ರಲ್ಲಿ 8ನೇ ನಿಯಮದಲ್ಲಿನ (2)ನೇ ಉಪ–ನಿಯಮದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು, ಒಂದು ಅನುದಾನಿತ ಸಂಸ್ಥೆಯಲ್ಲಿನ ಯಾವುದೇ ಅನುದಾನರಹಿತ ಹುದ್ದೆಯನ್ನು, ಕರ್ನಾಟಕ ಅರೆಕಾಲಿಕ ಜಾಬ್ ಓರಿಯಂಟೆಡ್ ಕೋರ್ಸಿನ ನೌಕರರ ವಿಲೀನ ಅಧಿನಿಯಮ, 2011 (2011ರ ಕರ್ನಾಟಕ ಅಧಿನಿಯಮ 22)ರ ಮೇರೆಗೆ, ಅರೆಕಾಲಿಕ ಜಾಬ್ ಓರಿಯೆಂಟೆಡ್ ಕೋರ್ಸಿನ ನೌಕರರನ್ನು, ಒಂದು ಸಲದ ಕ್ರಮವಾಗಿ ವಿಲೀನಗೊಳಿಸುವುದರ ಮೂಲಕ ಭರ್ತಿ ಮಾಡಬೇಕಾಗಿದ್ದಲ್ಲಿ, ಅಂಥ ಹುದ್ದೆಯಲ್ಲಿ ಹಾಗೆ ವಿಲೀನಗೊಂಡ ವ್ಯಕ್ತಿಯ ನಿವೃತ್ತಿ, ರಾಜೀನಾಮೆ, ಕೆಲಸದಿಂದ ತೆಗೆದುಹಾಕುವುದು, ವಜಾಗೊಳಿಸುವುದು ಮತ್ತು ಮರಣ ಹೊಂದುವುದು ಮುಂತಾದ ಕಾರಣಗಳಿಂದ ಆ ಹುದ್ದೆ ತೆರವಾದ ಪಕ್ಷದಲ್ಲಿ, ಅದನ್ನು ಶಾಶ್ವತ ಅನುದಾನರಹಿತ ಹುದ್ದೆಯೆಂದು ಪರಿಗಣಿಸತಕ್ಕದ್ದೆಂಬ ಷರತ್ತಿಗೊಳಪಟ್ಟು ಅದನ್ನು ಅನುದಾನಿತ ಹುದ್ದೆಗೆ ತುಂಬಬಹುದಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಶೇಖರ

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)

ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ)

PR. 422

SC. 300

ಶಿಕ್ಷಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಇಡಿ 139 ಯುಪಿಸಿ 2014, ಬೆಂಗಳೂರು, ದಿನಾಂಕ: 18–10–2014

ಕರ್ನಾಟಕ ಶಿಕ್ಷಣ ಅಧಿನಿಯಮ, 1983 (1995ರ ಕರ್ನಾಟಕ ಅಧಿನಿಯಮ 1)ರ 145ನೇ ಪ್ರಕರಣದ (1)ನೇ ಉಪ–ಪ್ರಕರಣವು ಪ್ರದತ್ತಗೊಳಿಸಿದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕಾಲೇಜು ಶಿಕ್ಷಣ) ನಿಯಮಗಳು, 2003ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಉದ್ದೇಶಿಸಿರುವುದರಿಂದ ಈ ಮುಂದಿನ ನಿಯಮಗಳ ಕರಡನ್ನು, ಸದರಿ ಅಧಿನಿಯಮದ 145ನೇ ಪ್ರಕರಣದ (1)ನೇ ಉಪ–ಪ್ರಕರಣವು ಅಗತ್ಯಪಡಿಸಿದಂತೆ, ಅಧಿಸೂಚನೆ ಸಂ: ಇಡಿ 139 ಯುಪಿಸಿ 2008, ದಿನಾಂಕ: 25.09.2014ರಲ್ಲಿ, ಅದರಿಂದ ಬಾಧಿತರಾಗಬಹುದಾದ ಯಾರೇ ವ್ಯಕ್ತಿಗಳಿಂದ, ಸದರಿ ಕರಡು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸಲ್ಲಿಸುವಂತೆ ಕೋರಿ ಪ್ರಕಟಿಸಿರುವುದರಿಂದ;

ಸದರಿ ರಾಜ್ಯಪತ್ರವು, 26–09–2014ರಿಂದ ಸಾರ್ವಜನಿಕರಿಗೆ ಲಭ್ಯವಾಗುತ್ತಿರುವುದರಿಂದ;

ಮತ್ತು ರಾಜ್ಯ ಸರ್ಕಾರವು, ನಿರ್ದಿಷ್ಟ ಅವಧಿಯೊಳಗೆ ಸ್ವೀಕರಿಸಿದ ಆಕ್ಷೇಪಣೆ ಮತ್ತು ಸಲಹೆಗಳನ್ನು ಪರಿಗಣಿಸಿರುವುದರಿಂದ;

ಪ್ರಸ್ತುತ, ಕರ್ನಾಟಕ ಸರ್ಕಾರವು, ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕಾಲೇಜು ಶಿಕ್ಷಣ) ನಿಯಮಗಳು, 2003ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ, ಕರ್ನಾಟಕ ಶಿಕ್ಷಣ ಅಧಿನಿಯಮ, 1983 (1995ರ ಕರ್ನಾಟಕ ಅಧಿನಿಯಮ 1)ರ 145ನೇ ಪ್ರಕರಣದ (1)ನೇ ಉಪ–ಪ್ರಕರಣವು ಪ್ರದತ್ತಗೊಳಿಸಿದ ಅಧಿಕಾರಗಳನ್ನು ಚಲಾಯಿಸಿ, ಈ ಮೂಲಕ, ಈ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:–

ನಿಯಮಗಳು

1. **ಹೆಸರು ಮತ್ತು ಪ್ರಾರಂಭ:–** (1) ಈ ನಿಯಮಗಳನ್ನು, ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕಾಲೇಜು ಶಿಕ್ಷಣ) (2ನೇ ತಿದ್ದುಪಡಿ) ನಿಯಮಗಳು, 2014 ಎಂದು ಕರೆಯತಕ್ಕದ್ದು.

(2) ಇವು, ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು ಮತ್ತು ಇವು ಭವಿಷ್ಯವರ್ತಿಯಾಗಿ ಅನ್ವಯಿಸತಕ್ಕದ್ದು.

2. 18ನೇ ನಿಯಮದ ತಿದ್ದುಪಡಿ:– ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕಾಲೇಜು ಶಿಕ್ಷಣ) ನಿಯಮಗಳು, 2003ರಲ್ಲಿ, 18ನೇ ನಿಯಮದಲ್ಲಿ, (4)ನೇ ಉಪ–ನಿಯಮ ಮತ್ತು ಅದಕ್ಕೆ ಸಂಬಂಧಪಟ್ಟ ನಮೂದುಗಳಿಗೆ ಸಂಬಂಧಿಸಿದಂತೆ ಈ ಮುಂದಿನದನ್ನು ಬದಲಿಯಾಗಿ ಸೇರಿಸತಕ್ಕದ್ದು, ಎಂದರೆ:–

"(4) ಆಡಳಿತ ಮಂಡಳಿಯು, (1)ನೇ ಉಪನಿಯಮದಡಿಯಲ್ಲಿ ಸಂಗ್ರಹಿಸಿದ ಪ್ರಮಾಣಕಗೊಳಿಸಿರುವ ಎರಡು ದರಗಳ ಶುಲ್ಕದ ಪೈಕಿ ಒಂದು ದರದ ಶುಲ್ಕವನ್ನು ಜಂಟಿ ಖಾತೆಗೆ ಜಮೆ ಮಾಡತಕ್ಕದ್ದು ಮತ್ತು ಸಂಗ್ರಹಿಸಲಾದ ಮತ್ತೊಂದು ದರದ ಶುಲ್ಕವನ್ನು ಯಾವ ಬ್ಯಾಂಕಿನಲ್ಲಿ ಕಾಲೇಜಿನ ಖಾತೆಯನ್ನು ತೆರೆಯಲಾಗಿದೆಯೋ ಅದೇ ಖಾತೆಗೆ ಜಮೆ ಮಾಡಬಹುದಾಗಿದೆ ಮತ್ತು ಈ ಮೊಬಲಗನ್ನು ಕಡ್ಡಾಯವಾಗಿ ವಿದ್ಯಾರ್ಥಿಗಳ ಪ್ರಯೋಜನ ಮತ್ತು ಕಾಲೇಜಿನ ಅಭಿವೃದ್ಧಿಗೆ ಸಂಬಂಧಿಸಿದಂತೆ ಮಾತ್ರ ಬಳಸಬೇಕು. ಆಡಳಿತ ಮಂಡಳಿಯು, ಕಾಲೇಜಿನ ಲೆಕ್ಕ ಖಾತೆಯ ಮಾಸಿಕ ವಿವರಪಟ್ಟಿಯನ್ನು ನಿರ್ದೇಶಕರಿಗೆ ಒದಗಿಸತಕ್ಕದ್ದು ಮತ್ತು ಅದನ್ನು ಹಾಗೆ ಒದಗಿಸಲು ಬ್ಯಾಂಕ್‌ಗೆ ಅಧಿಕಾರ ನೀಡತಕ್ಕದ್ದು. ಜಂಟಿ ಖಾತೆಯಲ್ಲಿ ಸಂಚಿತಗೊಂಡ ಮೊಬಲಗನ್ನು ಸಂಬಳಗಳ ಬಾಕಿ ಸಂದಾಯಕ್ಕೆ ಸಂಬಂಧಿಸಿದಂತೆ ಅಥವಾ ಸರ್ಕಾರವು ಅಧಿಕಾರ ನೀಡಿದ ಯಾವುದೇ ಇತರ ಉದ್ದೇಶಗಳಿಗೆ ಖರ್ಚು ಮಾಡುವುದಕ್ಕಾಗಿ ಬಳಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಶೇಖರ

PR. 423 ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)

SC. 300 ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ)

ಶಿಕ್ಷಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಇಡಿ 156 ಯುಪಿಸಿ 2013, ಬೆಂಗಳೂರು, ದಿನಾಂಕ: 30–07–2014

ಕರ್ನಾಟಕ ಶಿಕ್ಷಣ ಅಧಿನಿಯಮ, 1983 (1995ರ ಕರ್ನಾಟಕ ಅಧಿನಿಯಮ 1)ರ 145ನೇ ಪ್ರಕರಣದ (1)ನೇ ಉಪ–ಪ್ರಕರಣವು ಪ್ರದತ್ತಗೊಳಿಸಿರುವ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ರಚಿಸಲು ಉದ್ದೇಶಿಸಿರುವ , ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಮಾನ್ಯತೆಯ ನಿಬಂಧನೆಗಳು ಮತ್ತು ಷರತ್ತುಗಳು) (ಕಾಲೇಜು ಶಿಕ್ಷಣ) ನಿಯಮಗಳು, 2014ರ ಕರಡನ್ನು, ಸದರಿ ಅಧಿನಿಯಮದ 145ನೇ ಪ್ರಕರಣದ (1)ನೇ ಉಪ–ಪ್ರಕರಣವು ಅಗತ್ಯಪಡಿಸಿದಂತೆ, ದಿನಾಂಕ: 03.07.2014ರ ಕರ್ನಾಟಕ ರಾಜ್ಯಪತ್ರದ ಭಾಗ–IV–ಎ ನಲ್ಲಿ ಅಧಿಸೂಚನೆ ಸಂ: ಇಡಿ 156 ಯುಪಿಸಿ 2013, ದಿನಾಂಕ: 26.05.2014ರಲ್ಲಿ ಅದರಿಂದ ಬಾಧಿತರಾಗಬಹುದಾದ ಯಾರೇ ವ್ಯಕ್ತಿಗಳಿಂದ, ಸದರಿ ಕರಡು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸಲ್ಲಿಸುವಂತೆ ಕೋರಿ ಪ್ರಕಟಿಸಿರುವುದರಿಂದ;

ಸದರಿ ರಾಜ್ಯಪತ್ರವು, 03–07–2014 ರಿಂದ ಸಾರ್ವಜನಿಕರಿಗೆ ಲಭ್ಯವಾಗುತ್ತಿರುವುದರಿಂದ;

ಮತ್ತು ನಿಗದಿಪಡಿಸಿದ ಅವಧಿಯೊಳಗೆ ಸ್ವೀಕರಿಸಲಾದ ಆಕ್ಷೇಪಣೆ ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸಿರುವುದರಿಂದ;

ಪ್ರಸ್ತುತ, ಕರ್ನಾಟಕ ಶಿಕ್ಷಣ ಅಧಿನಿಯಮ, 1983 (1995ರ ಕರ್ನಾಟಕ ಅಧಿನಿಯಮ, 1)ರ 145ನೇ ಪ್ರಕರಣದ (1)ನೇ ಉಪ–ಪ್ರಕರಣವು ಪ್ರದತ್ತಗೊಳಿಸಿರುವ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ, ಈ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:–

ನಿಯಮಗಳು

1. **ಹೆಸರು ಮತ್ತು ಪ್ರಾರಂಭ:–** (1) ಈ ನಿಯಮಗಳನ್ನು, ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಮಾನ್ಯತೆಯ ನಿಬಂಧನೆಗಳು ಮತ್ತು ಷರತ್ತುಗಳು) (ಕಾಲೇಜು ಶಿಕ್ಷಣ) ನಿಯಮಗಳು, 2014 ಎಂದು ಕರೆಯತಕ್ಕದ್ದು.

(2) ಇವು, ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ಪರಿಭಾಷೆಗಳು:– ಈ ನಿಯಮಗಳಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿದ್ದ ಹೊರತು,_

(ಎ) " ಅಧಿನಿಯಮ" ಎಂದರೆ, ಕರ್ನಾಟಕ ಶಿಕ್ಷಣ ಅಧಿನಿಯಮ, 1983 (1995ರ ಕರ್ನಾಟಕ ಅಧಿನಿಯಮ 1);

(ಬಿ) "ಕಾಲೇಜು ಶಿಕ್ಷಣ ಸಂಸ್ಥೆಗಳು" ಎಂದರೆ, ಸ್ನಾತಕ ಪದವಿ ಅಥವಾ ಸ್ನಾತಕೋತ್ತರ ಪದವಿಯ ಶಿಕ್ಷಣ ನೀಡುವ ಮತ್ತು ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಗಳು;

(ಸಿ) "ನಮೂನೆ" ಎಂದರೆ, ಈ ನಿಯಮಗಳಿಗೆ ಅನುಬಂಧಿಸಲಾಗಿರುವ ನಮೂನೆ;

(ಡಿ) "ಅಲ್ಪಸಂಖ್ಯಾತ ಸಮುದಾಯ" ಎಂದರೆ, ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗದ ಉಪಬಂಧಗಳ ಅಡಿಯಲ್ಲಿ ಅಧಿಸೂಚಿಸಿರುವ ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯ;

(ಇ) "ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆ" ಎಂದರೆ, ಕರ್ನಾಟಕ ಶಿಕ್ಷಣ ಅಧಿನಿಯಮ, 1983 (1995ರ ಕರ್ನಾಟಕ ಅಧಿನಿಯಮ 1)ರ 2ನೇ ಪ್ರಕರಣದ (21)ನೇ ಖಂಡದಲ್ಲಿ ಪರಿಭಾಷಿಸಿರುವ ಧಾರ್ಮಿಕ ಅಲ್ಪಸಂಖ್ಯಾತ ಸಂಸ್ಥೆಗಳು;

(ಎಫ್) "ಪ್ರಕರಣ" ಎಂದರೆ, ಅಧಿನಿಯಮದ ಪ್ರಕರಣ;

(ಜಿ) "ಶೋಧನಾ ಸಮಿತಿ" ಎಂದರೆ, 4(8)ನೇ ನಿಯಮದ ಅಡಿಯಲ್ಲಿ ರಚಿಸಲಾದ ಶೋಧನಾ ಸಮಿತಿ.

–ಎಂದು ಅರ್ಥ.

(2) ಈ ನಿಯಮಗಳಲ್ಲಿ ಬಳಸಲಾದ ಆದರೆ, ಪರಿಭಾಷಿಸಿರದ ಪದಗಳು ಮತ್ತು ಪದಾವಳಿಗಳು, ಈ ಅಧಿನಿಯಮದಲ್ಲಿ ಅವುಗಳಿಗೆ ಗೊತ್ತುಪಡಿಸಿರುವ ಅದೇ ಅರ್ಥವನ್ನೇ ಹೊಂದಿರತಕ್ಕದ್ದು.

3. **ಅಲ್ಪಸಂಖ್ಯಾತ ಸ್ಥಾನವನ್ನು ಘೋಷಿಸುವ ಸಕ್ಷಮ ಪ್ರಾಧಿಕಾರ:–** ಕಾಲೇಜು ಶಿಕ್ಷಣ ಸಂಸ್ಥೆಗಳಿಗೆ ಧಾರ್ಮಿಕ/ಭಾಷಿಕ ಅಲ್ಪಸಂಖ್ಯಾತ ಸ್ಥಾನವನ್ನು ಘೋಷಿಸುವುದಕ್ಕೆ ಸಂಬಂಧಿಸಿದಂತೆ, ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಶಿಕ್ಷಣ ಇಲಾಖೆ ಇವರು ಸಕ್ಷಮ ಪ್ರಾಧಿಕಾರವಾಗಿರತಕ್ಕದ್ದು.

4. **ಮಾನ್ಯತೆಗೆ ಸಂಬಂಧಿಸಿದ ಅರ್ಹತಾ ಮಾನದಂಡ:–** (1) ಇಲಾಖೆ ಅಥವಾ ರಾಜ್ಯ ಸರ್ಕಾರ ಅಥವಾ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ರಾಷ್ಟ್ರೀಯ ಆಯೋಗ, ನವದೆಹಲಿ–ಇವು ಒಂದು ನಿರ್ದಿಷ್ಟ ಆದೇಶದ ಮೂಲಕ ಅಥವಾ ಯಾವುದೇ ನ್ಯಾಯಾಲಯದ ಆಜ್ಞೆಯ ಮೂಲಕ ಈಗಾಗಲೇ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯೆಂದು ಘೋಷಿಸಲಾಗಿರುವಂಥ ಕಾಲೇಜು ಶಿಕ್ಷಣ ಸಂಸ್ಥೆಗಳು, ಈ ನಿಯಮಗಳ ಅಡಿಯಲ್ಲಿ ಅಲ್ಪಸಂಖ್ಯಾತ ಸ್ಥಾನದ ಘೋಷಣೆ ಮಾಡುವುದಕ್ಕೆ ಸಂಬಂಧಿಸಿದಂತೆ ಮತ್ತೊಮ್ಮೆ ಅರ್ಜಿ ಸಲ್ಲಿಸಬೇಕಾದ ಅಗತ್ಯ ಇರುವುದಿಲ್ಲ. ಆದರೆ, ಆಡಳಿತ ಮಂಡಳಿ ಅಥವಾ ಆಡಳಿತ ಪರಿಷತ್ತುಗಳಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಿರುವುದು ಅಥವಾ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ವಿದ್ಯಾರ್ಥಿಗಳ ಸಂಖ್ಯಾ ಪ್ರಮಾಣದಲ್ಲಿ ಯಾವುದೇ ಕೊರತೆ ಉಂಟಾಗಿರುವುದರ ಸಂಬಂಧದಲ್ಲಿ (5) ಮತ್ತು (6)ನೇ ಉಪ–ನಿಯಮಗಳಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಅನುಪಾಲನೆ ಮಾಡಿರುವುದಕ್ಕೆ ಸಂಬಂಧಿಸಿದಂತೆ ನಿಯತಕಾಲಿಕವಾಗಿ ವರದಿಗಳನ್ನು ಸಲ್ಲಿಸತಕ್ಕದ್ದು.

ಪರಂತು ಅವು, 10ನೇ ನಿಯಮವನ್ನು ಅನುಪಾಲಿಸುವುದಕ್ಕೆ ಮತ್ತು 12ನೇ ನಿಯಮದ ಅಡಿಯಲ್ಲಿ ನವೀಕರಣ ಮಾಡುವುದಕ್ಕೆ ಮತ್ತು (5) ಮತ್ತು (6)ನೇ ಉಪ–ನಿಯಮದಡಿಯಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಅನುಪಾಲನೆ ಮಾಡಲಾಗುತ್ತಿದೆಯೇ ಎನ್ನುವುದನ್ನು ಕುರಿತು ಸಕ್ಷಮ ಪ್ರಾಧಿಕಾರವು ನಿಯತಕಾಲಿಕವಾಗಿ ಮಾಡುವ ಪುನರವಲೋಕನಕ್ಕೆ ಒಳಪಟ್ಟಿರತಕ್ಕದ್ದು.

(2) ಅಲ್ಪಸಂಖ್ಯಾತ ಸಂಸ್ಥೆಯ ಸ್ಥಾನ ಕೋರಿ ಅರ್ಜಿ ಸಲ್ಲಿಸುವ ಹೊಸ ಕಾಲೇಜು ಶಿಕ್ಷಣ ಸಂಸ್ಥೆಯು, ಕರ್ನಾಟಕ ಶಿಕ್ಷಣ ಅಧಿನಿಯಮದ ಅಡಿಯಲ್ಲಿ ಅಥವಾ ಬಾಂಬೆ ಸಾರ್ವಜನಿಕ ಟ್ರಸ್ಟ್ ಅಧಿನಿಯಮ, 1950ರ ಅಡಿಯಲ್ಲಿ ಟ್ರಸ್ಟ್ ಎಂದು ಅಥವಾ ಕರ್ನಾಟಕ ಸೊಸೈಟಿಗಳ ನೋಂದಣಿ ಅಧಿನಿಯಮ, 1960ರ ಅಡಿಯಲ್ಲಿ ಟ್ರಸ್ಟ್ ಅಥವಾ ಸಂಬಂಧಪಟ್ಟ ಇತರ ಕಾನೂನಿನಡಿಯಲ್ಲಿ ಸೊಸೈಟಿ ಎಂದು ನೋಂದಣಿ ಮಾಡತಕ್ಕದ್ದು. ಸಂಸ್ಥೆಯು ಅದು ಯಾವ ಅಲ್ಪಸಂಖ್ಯಾತ ಸಮುದಾಯಕ್ಕೆ ಸಂಬಂಧಪಟ್ಟಿರುವುದೋ, ಆ ಸಮುದಾಯದ ಹಿತಾಸಕ್ತಿಗಾಗಿ, ಸೇವೆ ಸಲ್ಲಿಸಲು ಅದನ್ನು ರಚಿಸಲಾಗಿದೆ ಎನ್ನುವ ಸಂಗತಿಯನ್ನು ಅದು ತನ್ನ ಬೈಲಾ ಅಥವಾ ನಿಯಮಗಳಲ್ಲಿ ಸೂಚಿಸಿರತಕ್ಕದ್ದು.

(3) ಭಾರತ ಸರ್ಕಾರವು ಅಧಿಸೂಚಿಸಿದ ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯವು ಸ್ಥಾಪಿಸಿರುವ ಒಂದು ಕಾಲೇಜು ಶಿಕ್ಷಣ ಸಂಸ್ಥೆಯು, ಅಂಥ ಶಿಕ್ಷಣ ಸಂಸ್ಥೆಗೆ ಧಾರ್ಮಿಕ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆ ಸ್ಥಾನವನ್ನು ನೀಡುವಂತೆ ಕೋರಿ ಅರ್ಜಿ ಸಲ್ಲಿಸಲು ಅರ್ಹತೆ ಹೊಂದಿರತಕ್ಕದ್ದು.

(4) ಭಾಷಿಕ ಅಲ್ಪಸಂಖ್ಯಾತರು ಸ್ಥಾಪಿಸಿರುವ ಒಂದು ಕಾಲೇಜು ಶಿಕ್ಷಣ ಸಂಸ್ಥೆಯು, ಅದು ನಡೆಸುತ್ತಿರುವ ಅಂಥ ಸಂಸ್ಥೆಗಳನ್ನು ಭಾಷಿಕ ಅಲ್ಪಸಂಖ್ಯಾತ ಸಂಸ್ಥೆಗಳೆಂದು ಅಲ್ಪಸಂಖ್ಯಾತ ಸ್ಥಾನವನ್ನು ಘೋಷಿಸುವಂತೆ ಕೋರಿ ಅರ್ಜಿ ಸಲ್ಲಿಸಲು ಅರ್ಹತೆ ಹೊಂದಿರತಕ್ಕದ್ದು.

(5) ಕಾಲೇಜು ಶಿಕ್ಷಣ ಸಂಸ್ಥೆಯ ಟ್ರಸ್ಟ್‌ನ ಟ್ರಸ್ಟಿಗಳು ಮತ್ತು ಸೊಸೈಟಿಯ ಆಡಳಿತ ಮಂಡಳಿಯ ಸದಸ್ಯರ ಪೈಕಿ, ಕನಿಷ್ಠ ಮೂರನೇ ಎರಡರಷ್ಟು ಟ್ರಸ್ಟಿಗಳು ಮತ್ತು ಸದಸ್ಯರು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರಾಗಿರತಕ್ಕದ್ದು.

(6) ಒಂದು ಕಾಲೇಜು ಶಿಕ್ಷಣ ಸಂಸ್ಥೆಗೆ ಪ್ರವೇಶಾತಿ ನೀಡುವ ಒಟ್ಟು ವಿದ್ಯಾರ್ಥಿಗಳ ಪೈಕಿ, ಸದರಿ ಶಿಕ್ಷಣ ಸಂಸ್ಥೆಯಲ್ಲಿ ಪ್ರವೇಶ ಪಡೆದಿರುವ ಶೇಕಡಾ ಐವತ್ತಕ್ಕಿಂತ ಕಡಿಮೆಯಲ್ಲದಷ್ಟು ವಿದ್ಯಾರ್ಥಿಗಳು, ಕರ್ನಾಟಕ ರಾಜ್ಯದ ಸದರಿ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರಾಗಿರತಕ್ಕದ್ದು.

5. ಅಲ್ಪಸಂಖ್ಯಾತ ಸ್ಥಾನ ಘೋಷಣೆ ಮಾಡುವುದಕ್ಕೆ ಸಂಬಂಧಿಸಿದಂತೆ ಅನುಸರಿಸಬೇಕಾದ ಕಾರ್ಯವಿಧಾನ:– (1) ಧಾರ್ಮಿಕ ಅಥವಾ ಭಾಷಿಕ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ಎಂದು ಅಲ್ಪಸಂಖ್ಯಾತ ಸ್ಥಾನವನ್ನು ಘೋಷಿಸುವಂತೆ ಕೋರುವ ಕಾಲೇಜು ಶಿಕ್ಷಣ ಸಂಸ್ಥೆಯು, ನಮೂನೆ–ಎ ನಲ್ಲಿ ಇದಕ್ಕಾಗಿ ಅರ್ಜಿ ಸಲ್ಲಿಸತಕ್ಕದ್ದು. ಈ ನಮೂನೆಯು, 7ನೇ ನಿಯಮದಲ್ಲಿ ನಿಗದಿಪಡಿಸಿರುವ ದಸ್ತಾವೇಜುಗಳನ್ನು ಒಳಗೊಂಡಿರತಕ್ಕದ್ದು. ಅದರಲ್ಲಿ ಆ ಸಂಸ್ಥೆಯು, ಧಾರ್ಮಿಕ ಅಥವಾ ಭಾಷಾ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯಲ್ಲಿ ಯಾವ ಅಲ್ಪಸಂಖ್ಯಾತ ಸ್ಥಾನವನ್ನು ಘೋಷಿಸುವಂತೆ ಕೋರಲಾಗುತ್ತಿದೆ ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಿರತಕ್ಕದ್ದು. ಅಲ್ಲದೆ ಅಂಥ ಶಿಕ್ಷಣ ಸಂಸ್ಥೆಯು 4 ಮತ್ತು 6ನೇ ನಿಯಮದಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಪಾಲಿಸಲಾಗಿದೆ ಎನ್ನುವುದನ್ನು ರುಜುವಾತುಪಡಿಸುವುದಕ್ಕೆ ಸಂಬಂಧಿಸಿದ ಸೂಕ್ತ ದಸ್ತಾವೇಜುಗಳ ದೃಢೀಕೃತ ಛಾಯಾಪ್ರತಿಗಳನ್ನು ಲಗತ್ತಿಸತಕ್ಕದ್ದು.

(2) ಪ್ರತಿಯೊಂದು ಅರ್ಜಿಯ ಮೇಲೆ 500 ರೂ.ಗಳ ನ್ಯಾಯಿಕೇತರ ಸ್ಟಾಂಪು ರೂಪದ ನ್ಯಾಯಾಲಯ ಫೀಜಗಳನ್ನು ಅಂಟಿಸತಕ್ಕದ್ದು.

(3) ಅಲ್ಪಸಂಖ್ಯಾತ ಸ್ಥಾನ ಘೋಷಿಸುವಂತೆ ಕೋರಿರುವ ಹೊಸ ಕಾಲೇಜು ಶಿಕ್ಷಣ ಸಂಸ್ಥೆಯು 10,000 ರೂಪಾಯಿಗಳ (ಹತ್ತು ಸಾವಿರ ರೂಪಾಯಿಗಳು) ಮರುಸಂದಾಯ ಮಾಡದ ಪ್ರೊಸೆಸ್ಸು ಶುಲ್ಕವನ್ನು ಜಮೆ ಮಾಡತಕ್ಕದ್ದು. ಈ ಶುಲ್ಕವನ್ನು, ಆಯುಕ್ತರು, ಶಿಕ್ಷಣ ಇಲಾಖೆ ಇವರ ಹೆಸರಿನಲ್ಲಿ ಪಡೆದಿರುವ ಡಿಮ್ಯಾಂಡ್ ಡ್ರಾಫ್ಟ್ ರೂಪದಲ್ಲಿ ಸಂದಾಯ ಮಾಡತಕ್ಕದ್ದು.

(4) ಅರ್ಜಿದಾರ ಸಂಸ್ಥೆಯು, ನ್ಯಾಯಿಕೇತರ ಮುದ್ರಾಂಕ ಕಾಗದದ ಮೇಲೆ ನಮೂನೆ–ಬಿನಲ್ಲಿ ನೋಟರಿ ಮಾಡಿದ ಅಫಿಡಾವಿಟ್ಟನ್ನು ಸಲ್ಲಿಸತಕ್ಕದ್ದು.

(5) ಆಡಳಿತ ಪರಿಷತ್ತು ಮತ್ತು ಆಡಳಿತ ಮಂಡಲಿಯ ಸದಸ್ಯರು, ಅವರು ಯಾವ ಸಮುದಾಯ ಅಥವಾ ಭಾಷೆಗೆ ಸೇರಿದವರು ಎನ್ನುವ ಬಗ್ಗೆ ತಹಶೀಲ್ದಾರರು ನಿಗದಿತ ನಮೂನೆಯಲ್ಲಿ ನೀಡಿರುವ ಸಮುದಾಯ ಅಥವಾ ಭಾಷಿಕ ಪ್ರಮಾಣಪತ್ರವನ್ನು ಹಾಜರುಪಡಿಸತಕ್ಕದ್ದು.

(6) ಆ ಸಂಸ್ಥೆಯಲ್ಲಿ ಅಧ್ಯಯನ ಮಾಡುತ್ತಿರುವ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿರುವ ವಿದ್ಯಾರ್ಥಿಗಳ ವಿವರಗಳನ್ನು ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸತಕ್ಕದ್ದು.

(7) ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯಲ್ಲಿ ಸ್ವೀಕರಿಸುವ ಅರ್ಜಿಯನ್ನು, ಅದನ್ನು ಸಲ್ಲಿಸಿದ ದಿನದಂದೇ ಪ್ರಾಥಮಿಕ ಪರಿಶೀಲನೆ ಮಾಡತಕ್ಕದ್ದು. ಪ್ರಾಥಮಿಕ ಪರಿಶೀಲನೆಯ ಸಮಯದಲ್ಲಿ ಕಂಡುಬಂದ ಪೂರ್ತಿ ಭರ್ತಿ ಮಾಡಿಲ್ಲದಿರುವ ಅರ್ಜಿಗಳು ಮತ್ತು ನಿಗದಿತ ನಮೂನೆಯಲ್ಲಿ ಸಲ್ಲಿಸದಿರುವ, ನಿಗದಿತ ಶುಲ್ಕಗಳನ್ನು ಸಂದಾಯ ಮಾಡದಿರುವ ಅಥವಾ ಪೂರಕ ದಾಖಲೆಗಳನ್ನು ಹಾಜರುಪಡಿಸದಿರುವ ಅರ್ಜಿಗಳನ್ನು ಕುರಿತು ಅವುಗಳನ್ನು ಸಲ್ಲಿಸುತ್ತಿರುವ ಅರ್ಜಿದಾರನಿಗೆ ತಿಳಿಸತಕ್ಕದ್ದು ಮತ್ತು ಸ್ವೀಕೃತಿಯಲ್ಲಿ ಉಲ್ಲೇಖಿಸತಕ್ಕದ್ದು. ಆದರೆ, ಅರ್ಜಿದಾರನು ಅದೇ ಅರ್ಜಿಯನ್ನೇ ಇಟುಕೊಳ್ಳುವಂತೆ ಹೇಳಿದರೆ, ಅಪೂರ್ಣ ಮಾಹಿತಿ ನೀಡಿರುವ ಅಥವಾ ಅಪೂರ್ಣ ದಸ್ತಾವೇಜನ್ನು ಹಾಜರುಪಡಿಸಿರುವ ಕಾರಣದಿಂದ ಅದನ್ನು ತಿರಸ್ಕರಿಸಲಾಗಿದೆ ಎನ್ನುವ ಮಾಹಿತಿಯನ್ನು ಸಕ್ಷಮ ಪ್ರಾಧಿಕಾರಿಯು ಅರ್ಜಿ ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳೊಳಗೆ ಅರ್ಜಿದಾರನಿಗೆ ಲಿಖಿತದಲ್ಲಿ ತಿಳಿಸತಕ್ಕದ್ದು.

(8). ಅರ್ಜಿಗಳು ಅಂಗೀಕೃತಗೊಂಡ ಸಂದರ್ಭದಲ್ಲಿ, ಕಾಲೇಜು ಶಿಕ್ಷಣ ಆಯುಕ್ತರು, ಜಂಟಿ ನಿರ್ದೇಶಕರ ದರ್ಜೆಗಿಂತ ಕೆಳಗಿನದಲ್ಲದ ದರ್ಜೆಯ ಅಧಿಕಾರಿಯು ಅಧ್ಯಕ್ಷನಾಗಿರುವ ಮೂವರು ಸದಸ್ಯರಿಂದ ಕೂಡಿರುವ ಒಂದು ಸಮಿತಿಯನ್ನು ರಚಿಸತಕ್ಕದ್ದು. ಈ ಸಮಿತಿಯು, ಸಂಬಂಧಪಟ್ಟ ಕಾಲೇಜು ಶಿಕ್ಷಣ ಸಂಸ್ಥೆಗೆ ಭೇಟಿ ನೀಡತಕ್ಕದ್ದು ಮತ್ತು ನಮೂನೆ–ಬಿ ನಲ್ಲಿ ನಿರ್ದಿಷ್ಟಪಡಿಸಲಾದ ತಪಶೀಲು ಪಟ್ಟಿಯ ಪ್ರಕಾರ, ದಸ್ತಾವೇಜುಗಳನ್ನು ಮತ್ತು ವಾಸ್ತವಿಕ ಸ್ಥಿತಿಯನ್ನು ಪರಿಶೀಲಿಸತಕ್ಕದ್ದು ಹಾಗೂ ಅರ್ಜಿ ಸ್ವೀಕರಿಸಿದ ದಿನಾಂಕದಿಂದ ಇಪ್ಪತ್ತು ದಿನಗಳೊಳಗೆ, ಆ ಅರ್ಜಿಯನ್ನು ಶಿಫಾರಸ್ಸುಗಳ ಸಹಿತ ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರಿಗೆ ಸಲ್ಲಿಸತಕ್ಕದ್ದು. ಇದಾದ ನಂತರ ಆಯುಕ್ತರು, ಮೂವರು ಸದಸ್ಯರ ಸಮಿತಿಯು ಕಾರ್ಯಪ್ರಕ್ರಿಯೆ (ಪ್ರೊಸೆಸ್) ಮಾಡಿದ ತಪಶೀಲು ಪಟ್ಟಿಯ ಅನುಸಾರ ಪ್ರಸ್ತಾವನೆಯನ್ನು ಪರಿಶೀಲಿಸತಕ್ಕದ್ದು ಮತ್ತು ಅದಕ್ಕೆ ತಮ್ಮ ಷರಾ ಬರೆದು, ಮೂವರು ಸದಸ್ಯರ ಸಮಿತಿಯ ವರದಿಯನ್ನು ಸ್ವೀಕರಿಸಿದ ದಿನಾಂಕದಿಂದ ಹತ್ತು ದಿನಗಳ ಒಳಗೆ ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(9) ಆಯುಕ್ತರು ಶಿಫಾರಸ್ಸು ಮಾಡಿದ ಅರ್ಜಿಗಳ ಪರಿಶೀಲನೆ ಅಥವಾ ವಿಚಾರಣೆ ಮಾಡುವುದಕ್ಕೆ ಸಂಬಂಧಿಸಿದಂತೆ, ಸರ್ಕಾರದ ಮಟ್ಟದಲ್ಲಿ ಒಂದು ಶೋಧನಾ ಸಮಿತಿಯನ್ನು ರಚಿಸತಕ್ಕದ್ದು. ಅದು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(1) ಉಪಕಾರ್ಯದರ್ಶಿ, ಕಾಲೇಜು ಶಿಕ್ಷಣ ಇಲಾಖೆ,– ಅಧ್ಯಕ್ಷರು

(2) ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ)–ಸದಸ್ಯ ಕಾರ್ಯದರ್ಶಿ

(3) ಅಧೀನ ಕಾರ್ಯದರ್ಶಿ, ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ–ಸದಸ್ಯರು

(10) ಶೋಧನಾ ಸಮಿತಿಯು, ಅರ್ಜಿದಾರನ ಅಲ್ಪಸಂಖ್ಯಾತ ಸ್ಥಾನದ ಕ್ಲೇಮುಗಳನ್ನು ಪರಿಶೀಲಿಸತಕ್ಕದ್ದು ಮತ್ತು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗೆ ಸಕ್ಷಮ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

(11) ಶೋಧನಾ ಸಮಿತಿಯ, ಯಾವುದೇ ವಿಷಯವನ್ನು ವಿಚಾರಣೆ ಮಾಡಬೇಕಾದ ಅಥವಾ ಪರಿಶೀಲಿಸಬೇಕಾದ ಸಂದರ್ಭವಿದ್ದ ಪಕ್ಷದಲ್ಲಿ, ಅದರ ವಾಸ್ತವಿಕ ಸ್ಥಿತಿಯನ್ನು ಕುರಿತು ಪರಿಶೀಲನೆ ಮಾಡುವುದಕ್ಕಾಗಿ ಆ ವಿಷಯವನ್ನು ಸಂಬಂಧಪಟ್ಟ ಜಂಟಿ ನಿರ್ದೇಶಕರಿಗೆ ವಹಿಸತಕ್ಕದ್ದು ಅಥವಾ ಅವರನ್ನು ಅಧಿಕೃತಗೊಳಿಸತಕ್ಕದ್ದು. ಸಂಬಂಧಪಟ್ಟ ಜಂಟಿ ನಿರ್ದೇಶಕರು, ಶೋಧನಾ ಸಮಿತಿಯು ಗಮನಿಸಿದಂಥ ವಾಸ್ತವಿಕ ಸ್ಥಿತಿಯನ್ನು ಪರಿಶೀಲಿಸತಕ್ಕದ್ದು ಮತ್ತು ಅದರ ವರದಿಯನ್ನು ನಮೂನೆ– "ಸಿ" ಯಲ್ಲಿ ಸಲ್ಲಿಸತಕ್ಕದ್ದು.

(12) ಸಕ್ಷಮ ಪ್ರಾಧಿಕಾರವು, ಅರ್ಜಿಯ ಬಗೆಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಮೊದಲು, ಅರ್ಜಿದಾರ ಸಂಸ್ಥೆಯ ಅಹವಾಲನ್ನು, ಅದರ ಅಧಿಕೃತ ಪ್ರತಿನಿಧಿಗಳ ಮೂಲಕ ಆಲಿಸತಕ್ಕದ್ದು. ಇದಕ್ಕಾಗಿ ಆ ಸಂಸ್ಥೆಗೆ ಕನಿಷ್ಠ ಹತ್ತು ದಿನಗಳಿಗಿಂತ ಮುಂಚಿತವಾಗಿ ನೋಟೀಸು ನೀಡತಕ್ಕದ್ದು. ಅರ್ಜಿದಾರ ಸಂಸ್ಥೆಯು, ಅರ್ಜಿಯ ವಿಚಾರಣೆ ಮಾಡುವ ಸಮಯದಲ್ಲಿ, ಅರ್ಜಿ ಸಲ್ಲಿಸುವಾಗ (5) ಮತ್ತು (6)ನೇ ನಿಯಮದ ಅಡಿಯಲ್ಲಿ ಯಾವ ಮಾಹಿತಿಯನ್ನು ಒದಗಿಸಿರಬೇಕಾಗಿತ್ತೋ ಆ ಎಲ್ಲಾ ಮಾಹಿತಿಯನ್ನು ಒದಗಿಸತಕ್ಕದ್ದು.

(13) ಅರ್ಜಿದಾರ ಸಂಸ್ಥೆಯ ಅಹವಾಲನ್ನು ಆಲಿಸಿದ ತರುವಾಯ, ಸಕ್ಷಮ ಪ್ರಾಧಿಕಾರವು ನಮೂನೆ–ಡಿ ಯಲ್ಲಿ ಅಲ್ಪಸಂಖ್ಯಾತ ಸ್ಥಾನದ ಪ್ರಮಾಣಪತ್ರವನ್ನು ನೀಡಬಹುದು.

(14) ಅರ್ಜಿಯನ್ನು ತಿರಸ್ಕರಿಸಿದ ಸಂದರ್ಭದಲ್ಲಿ, ಸಕ್ಷಮ ಪ್ರಾಧಿಕಾರವು, ಹಾಗೆ ತಿರಸ್ಕರಿಸಿರುವುದಕ್ಕೆ ಸಂಬಂಧಿಸಿದಂತೆ ಇರುವ ಕಾರಣಗಳನ್ನು ಹೇಳಿರುವ ಸವಿವರವಾದ ಆದೇಶವನ್ನು ಆ ಅರ್ಜಿದಾರ ಸಂಸ್ಥೆಗೆ ನೀಡತಕ್ಕದ್ದು.

(15) ಸಕ್ಷಮ ಪ್ರಾಧಿಕಾರವು, ಅಲ್ಪಸಂಖ್ಯಾತ ಸಂಸ್ಥೆಯ ಸ್ಥಾನವನ್ನು ನಿರ್ಧರಿಸತಕ್ಕದ್ದು ಮತ್ತು ತಾನು ತೆಗೆದುಕೊಂಡಿರುವ ತೀರ್ಮಾನವನ್ನು ಶೋಧನಾ ಸಮಿತಿಯಿಂದ ಪ್ರಸ್ತಾವನೆಯನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯ ಒಳಗೆ ಆ ಅರ್ಜಿದಾರರಿಗೆ ತಿಳಿಸತಕ್ಕದ್ದು.

(16) ಪ್ರಸ್ತಾವನೆಯನ್ನು ಅಂಗೀಕರಿಸಿದ ದಿನಾಂಕದಿಂದ ತೊಂಬತ್ತು ದಿನಗಳ ಒಳಗೆ ನಿರ್ಧಾರ ತೆಗೆದುಕೊಳ್ಳಲು ವಿಫಲವಾದ ಪಕ್ಷದಲ್ಲಿ, ಅರ್ಜಿದಾರ ಸಂಸ್ಥೆಗೆ ಅಲ್ಪಸಂಖ್ಯಾತ ಸ್ಥಾನವನ್ನು ಪ್ರದತ್ತಗೊಳಿಸತಕ್ಕದ್ದು. ಅರ್ಜಿಯನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ವಿಷಯವು, ಸಕ್ಷಮ ಪ್ರಾಧಿಕಾರವು ಅರ್ಜಿಯನ್ನು ಪರಿಶೋಧಿಸುವುದಕ್ಕೆ ಒಳಪಟ್ಟಿರುತ್ತದೆ. ಇದು, ಅಂತಿಮವಾಗಿ ಅರ್ಜಿಯನ್ನು ಅಂಗೀಕರಿಸುವುದು ಅಥವಾ ತಿರಸ್ಕರಿಸುವುದನ್ನು ನಿರ್ಧರಿಸತಕ್ಕದ್ದು ಮತ್ತು ಈ ವಿಷಯನ್ನು ಅರ್ಜಿದಾರನಿಗೆ ಲಿಖಿತದಲ್ಲಿ ತಿಳಿಸತಕ್ಕದ್ದು.

6. ಅಲ್ಪಸಂಖ್ಯಾತ ಕಾಲೇಜು ಶಿಕ್ಷಣ ಸಂಸ್ಥೆಯ ಸ್ಥಾನವನ್ನು ಘೋಷಿಸುವುದಕ್ಕೆ ಸಂಬಂಧಿಸಿದ ನಿಬಂಧನೆಗಳು ಮತ್ತು ಷರತ್ತುಗಳು:–(1) ಅಲ್ಪಸಂಖ್ಯಾತ ಸ್ಥಾನದ ಘೋಷಣೆಯನ್ನು ಪ್ರತಿಯೊಂದು ಕಾಲೇಜು ಶಿಕ್ಷಣ ಸಂಸ್ಥೆಗೆ ನೀಡತಕ್ಕದ್ದು. ಅಂದರೆ ಈ ಸ್ಥಾನವನ್ನು ಮೂಲ ಟ್ರಸ್ಟ್‌ಗೆ ಅಥವಾ ನಿಕಾಯಕ್ಕೆ ನೀಡತಕ್ಕದ್ದಲ್ಲ.

(2) ಅರ್ಜಿದಾರ ಸಂಸ್ಥೆಯು, 4ನೇ ನಿಯಮದಲ್ಲಿ ಹೇಳಿರುವ ಎಲ್ಲಾ ಮಾನದಂಡಗಳನ್ನು ಒಪ್ಪಿ ಪಾಲಿಸತಕ್ಕದ್ದು. ಟ್ರಸ್ಟ್ ಅಥವಾ ಸೊಸೈಟಿ ಅಥವಾ ಆಡಳಿತ ಮಂಡಲಿಯಲ್ಲಿ ಯಾವುದೇ ಬದಲಾವಣೆಯಾದ ಪಕ್ಷದಲ್ಲಿ ಅಥವಾ ದಾಖಲಾಗಬೇಕಾಗಿರುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಸಂಖ್ಯಾ ಪ್ರಮಾಣದಲ್ಲಿ ಯಾವುದೇ ಕೊರತೆ ಉಂಟಾದ ಪಕ್ಷದಲ್ಲಿ, ಆ ವಿಷಯವನ್ನು ಅಂಥ ಬದಲಾವಣೆ ಉಂಟಾದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಸಕ್ಷಮ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

(3) ಕರ್ನಾಟಕ ರಾಜ್ಯದ ಹೊರಗೆ ಕೇಂದ್ರ ಸಂಸ್ಥೆಗಳನ್ನು ಹೊಂದಿರುವಂಥ ಆಡಳಿತ ಮಂಡಳಿಗಳು, ಕರ್ನಾಟಕದಲ್ಲಿ ಭಾಷಿಕ ಅಲ್ಪಸಂಖ್ಯಾತ ಸ್ಥಾನವನ್ನು ಕ್ಲೇಮು ಮಾಡುವ ಹಕ್ಕು ಹೊಂದುವುದಿಲ್ಲ.

7. ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಸ್ತಾವೇಜುಗಳ ಪ್ರತಿಗಳು:– ಅರ್ಜಿಯೊಂದಿಗೆ ಈ ಮುಂದಿನ ದಸ್ತಾವೇಜುಗಳನ್ನು ಲಗತ್ತಿಸತಕ್ಕದ್ದು.

(1) ಟ್ರಸ್ಟ್ ಪತ್ರ ಅಥವಾ ಸೊಸೈಟಿಯ ನೋಂದಣಿ ಪತ್ರದ ದೃಢೀಕೃತ ಛಾಯಾ ಪ್ರತಿ;

(2) ಅನುಸೂಚಿ ಅಥವಾ ಮೂಲ ಟ್ರಸ್ಟಿಗಳು ಅಥವಾ ಆಡಳಿತ ಮಂಡಲಿಯ ಸದಸ್ಯರ ಹೆಸರುಗಳನ್ನು ಸೂಚಿಸುವ ಭಾಗದ ದೃಢೀಕೃತ ಛಾಯಾ ಪ್ರತಿ;

(3) ಟ್ರಸ್ಟಿಗಳು ಅಥವಾ ಆಡಳಿತ ಮಂಡಲಿಯ ಸದಸ್ಯರ ಹೆಸರುಗಳಲ್ಲಿ ಯಾವುದೇ ಬದಲಾವಣೆಗಳು ಆಗಿದ್ದ ಪಕ್ಷದಲ್ಲಿ, ಬದಲಾವಣೆ ವರದಿಯ ದೃಢೀಕೃತ ಛಾಯಾಪ್ರತಿ;

(4) ಟ್ರಸ್ಟಿಗಳು ಅಥವಾ ಆಡಳಿತ ಮಂಡಲಿ ಸದಸ್ಯರುಗಳ ಧಾರ್ಮಿಕ ಸಂಲಗ್ನತೆ ಅಥವಾ ಭಾಷಿಕ ಹಿನ್ನಲೆಯನ್ನು ರುಜುವಾತುಪಡಿಸುವಂಥ ಕ್ರೈಸ್ತರ ದೀಕ್ಷಾಸ್ನಾನ, ಶಾಲಾ ವರ್ಗಾವಣೆ ಪತ್ರ ಮೊದಲಾದವು;

(5) ಅರ್ಜಿದಾರ ಟ್ರಸ್ಟ್ ಅಥವಾ ಸೊಸೈಟಿಯು ಶಿಕ್ಷಣ ಸಂಸ್ಥೆ ನಡೆಸುತ್ತಿರುವುದನ್ನು ರುಜುವಾತುಪಡಿಸುವ ದಾಖಲೆ;

(6) ಅರ್ಜಿದಾರ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯಲ್ಲಿ ದಾಖಲಾಗಿರುವ ಶೇಕಡ ಐವತ್ತರಷ್ಟು ವಿದ್ಯಾರ್ಥಿಗಳು, ಸದರಿ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿರತಕ್ಕದ್ದು ಎನ್ನುವುದನ್ನು ಖಚಿತಪಡಿಸುವುದಕ್ಕೆ ಸಂಬಂಧಿಸಿದಂತೆ ಸಂಸ್ಥೆಯು ಸಲ್ಲಿಸಿರುವ ಅಫಿಡಾವಿಟ್ಟು;

(7) ವಿದ್ಯಾರ್ಥಿಗಳ ಧಾರ್ಮಿಕ ಅಥವಾ ಭಾಷಿಕ ಸ್ಥಾನವನ್ನು ಸೂಚಿಸುವಂಥ, ಕಾಲೇಜು ಶಿಕ್ಷಣ ಸಂಸ್ಥೆಯ ಪ್ರವೇಶಾತಿ ರಿಜಿಸ್ಟರ್ ಅಥವಾ ಪ್ರವೇಶಾತಿ ರಿಜಿಸ್ಟರಿನ ಉದ್ಧೃತ ಭಾಗದ ದೃಢೀಕೃತ ಛಾಯಾಪ್ರತಿ;

8. ಹಾಲಿ ಶಿಕ್ಷಣ ಸಂಸ್ಥೆಯ ಅಲ್ಪಸಂಖ್ಯಾತ ಸ್ಥಾನ ಕುರಿತ ಪರಿಶೀಲನೆಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ಕಾರ್ಯವಿಧಾನ: (1) ಈ ನಿಯಮಗಳು ಪ್ರಾರಂಭವಾಗುವುದಕ್ಕಿಂತ ಮೊದಲು ಸರ್ಕಾರದಿಂದ ಅಥವಾ ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರಿಂದ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸಲಾಗಿರುವ ಅಥವಾ ಘೋಷಿಸಲಾಗಿದೆಯೆಂದು ಭಾವಿಸಲಾಗಿರುವ ಕಾಲೇಜು ಶಿಕ್ಷಣ ಸಂಸ್ಥೆಗಳು, ಆಡಳಿತ ಮಂಡಲಿ ಅಥವಾ ಆಡಳಿತ ಪರಿಷತ್ತಿನಲ್ಲಿ ಬದಲಾವಣೆಗಳನ್ನು ಮಾಡಿರುವುದರ ಸಂಬಂಧದಲ್ಲಿ 4ನೇ ನಿಯಮದ (5) ಮತ್ತು (6)ನೇ ಉಪನಿಯಮಗಳನ್ನು ಅನುಪಾಲನೆ ಮಾಡಿರುವುದಕ್ಕೆ ಸಂಬಂಧಿಸಿದಂತೆ ನಿಯತಕಾಲಿಕವಾಗಿ ವರದಿಯನ್ನು ಸಲ್ಲಿಸತಕ್ಕದ್ದು.

(2) ಕಾಲೇಜು ಶಿಕ್ಷಣ ಸಂಸ್ಥೆಯು ಪ್ರಸ್ತಾವನೆಯನ್ನು ನವೆಂಬರ್ ತಿಂಗಳು ಮುಗಿಯುವುದರೊಳಗೆ ಆಯುಕ್ತರ ಕಛೇರಿಗೆ ಕಳುಹಿಸತಕ್ಕದ್ದು. ಆಯುಕ್ತರ ಕಛೇರಿಯು, ಅರ್ಜಿಯನ್ನು ಪರಿಶೀಲನೆ ಮಾಡಿ, ವರದಿಯನ್ನು ಜನವರಿ ತಿಂಗಳು ಮುಗಿಯುವದರೊಳಗೆ ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು. ಸಕ್ಷಮ ಪ್ರಾಧಿಕಾರವು ಅದನ್ನು ಸತ್ಯಾಪನೆ ಮಾಡತಕ್ಕದ್ದು ಮತ್ತು ಅಲ್ಪಸಂಖ್ಯಾತ ಸ್ಥಾನದ ಮುಂದುವರಿಕೆಯ ಪ್ರಮಾಣಪತ್ರವನ್ನು ಮಾರ್ಚ್ ತಿಂಗಳು ಮುಗಿಯುವುದರೊಳಗೆ ಅಂಥ ಸಂಸ್ಥೆಗೆ ನೀಡಬಹುದು.

9. **ಅಲ್ಪಸಂಖ್ಯಾತ ಕಾಲೇಜು ಶಿಕ್ಷಣ ಸಂಸ್ಥೆಗಳು ವಿವರಪಟ್ಟಿಕೆಯನ್ನು ಸಲ್ಲಿಸುವುದು:–** ಈ ಉಪ ಬಂಧಗಳಡಿಯಲ್ಲಿ ಅಲ್ಪಸಂಖ್ಯಾತ ಸಂಸ್ಥೆಗಳೆಂದು ಘೋಷಿಸಲ್ಪಟ್ಟ ಪ್ರತಿಯೊಂದು ಅಲ್ಪಸಂಖ್ಯಾತ ಕಾಲೇಜು ಶಿಕ್ಷಣ ಸಂಸ್ಥೆಯು ಪ್ರತೀ ವರ್ಷ ಪ್ರವೇಶಾತಿ ಪ್ರಕ್ರಿಯೆಯ ಪೂರ್ಣಗೊಂಡ ತರುವಾಯ, ಹದಿನೈದು ದಿನಗಳೊಳಗಾಗಿ ಆ ಕಾಲೇಜು ಶಿಕ್ಷಣ ಸಂಸ್ಥೆಯಲ್ಲಿ ಪ್ರವೇಶ ಪಡೆದ ಅಲ್ಪಸಂಖ್ಯಾತ ಮತ್ತು ಅಲ್ಪಸಂಖ್ಯಾತೇತರ ವಿದ್ಯಾರ್ಥಿನಿ ಮತ್ತು ವಿದ್ಯಾರ್ಥಿಗಳ ವಿವರಗಳನ್ನು ಪ್ರತ್ಯೇಕವಾಗಿ ಹೇಳಿರುವ ಒಂದು ವಿವರಪಟ್ಟಿಕೆಯನ್ನು ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಮುಖಾಂತರ ಸಲ್ಲಿಸತಕ್ಕದ್ದು.

10. **ಕುಂದುಕೊರತೆಗಳ ನಿವಾರಣೆ:–** ಈ ನಿಯಮಗಳ ಅಡಿಯಲ್ಲಿ, ಧಾರ್ಮಿಕ ಅಥವಾ ಭಾಷಿಕ ಅಲ್ಪಸಂಖ್ಯಾತ ಸಂಸ್ಥೆಯೆಂದು ಘೋಷಿಸಲಾಗಿರುವಂಥ ಸಂಸ್ಥೆಯ ಅಲ್ಪಸಂಖ್ಯಾತ ಸ್ಥಾನದ ಸತ್ಯಶೀಲತೆಗೆ ಸಂಬಂಧಿಸಿದಂತೆ ಅಥವಾ ಪ್ರವೇಶ ನೀಡುವ ಪ್ರಕ್ರಿಯೆಯಲ್ಲಿ ಯಾರೇ ಅಲ್ಪಸಂಖ್ಯಾತ ವಿದ್ಯಾರ್ಥಿಗೆ ಅನ್ಯಾಯವಾಗಿರುವುದಕ್ಕೆ ಸಂಬಂಧಿಸಿದಂತೆ ಅಥವಾ ಯಾವುದೇ ಅಂಥ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಯಾವುದೇ ದೂರನ್ನು ಸ್ವೀಕರಿಸಿದ ಪಕ್ಷದಲ್ಲಿ, ಸಕ್ಷಮ ಪ್ರಾಧಿಕಾರವು, ಆ ಸಂಬಂಧಪಟ್ಟ ಸಂಸ್ಥೆ ತನ್ನ ಅಹವಾಲನ್ನು ಹೇಳಿಕೊಳ್ಳುವುದಕ್ಕಾಗಿ ಒಂದು ಯುಕ್ತ ಅವಕಾಶವನ್ನು ನೀಡುವ ಮೂಲಕ ಪಕ್ಷಕಾರರ ವಿಚಾರಣೆ ನಡೆಸಬಹುದು ಮತ್ತು ಸಂಸ್ಥೆಯ ದಾಖಲೆಗಳನ್ನು ಪರಿಶೀಲನೆ ಮಾಡಬಹುದು ಅಥವಾ ಆಯುಕ್ತರೇ ಈ ವಿಷಯವನ್ನು ತನಿಖೆ ಮಾಡುವಂತೆ ಹೇಳಬಹುದು. ಸಂಬಂಧಪಟ್ಟ ಎಲ್ಲಾ ಪಕ್ಷಕಾರರಿಗೆ ವಿಚಾರಣೆಯ ನೋಟೀಸುಗಳನ್ನು ನೀಡುವ ಪ್ರಕ್ರಿಯೆಯನ್ನು ಅರ್ಜಿದಾರ ಸಂಸ್ಥೆಗೆ ತನ್ನ ಅಹವಾಲು ಹೇಳಿಕೊಳ್ಳುವುದಕ್ಕೆ ಒಂದು ಅವಕಾಶವನ್ನು ನೀಡುವುದು, ಬಾಧಿತ ಪಕ್ಷಕಾರರಿಂದ ಸಾಕ್ಷ್ಯ ಪಡೆದುಕೊಳ್ಳುವುದು ಮತ್ತು ಸಂಸ್ಥೆಯ ದಾಖಲೆಗಳನ್ನು ಪರಿಶೀಲನೆ ಮಾಡುವುದು ಮೊದಲಾದವುಗಳನ್ನು ಪೂರೈಸಿದ ನಂತರ ಅನುಸರಿಸತಕ್ಕದ್ದು. ಆಯುಕ್ತರು, ಸಕ್ಷಮ ಪ್ರಾಧಿಕಾರಕ್ಕೆ ವರದಿಯನ್ನು ಸಲ್ಲಿಸತಕ್ಕದ್ದು ಮತ್ತು ಆನಂತರ, ಅವರು ಆ ವಿಷಯಕ್ಕೆ ಸಂಬಂಧಿಸಿದಂತೆ ಸವಿವರವಾದ ಆದೇಶಗಳನ್ನು ಹೊರಡಿಸತಕ್ಕದ್ದು.

11. **ಅಲ್ಪಸಂಖ್ಯಾತ ಸ್ಥಾನವನ್ನು ರದ್ದುಪಡಿಸುವುದಕ್ಕೆ ಸಂಬಂಧಿಸಿದಂತೆ ಇರುವ ಕಾರಣಗಳು:–** ಒಮ್ಮೆ ಒಂದು ಶಿಕ್ಷಣ ಸಂಸ್ಥೆಗೆ ಧಾರ್ಮಿಕ ಅಥವಾ ಭಾಷಿಕ ಅಲ್ಪಸಂಖ್ಯಾತ ಸಂಸ್ಥೆಯ ಸ್ಥಾನವನ್ನು ನೀಡಿದ ನಂತರ, ಅದನ್ನು ಈ ಮುಂದಿನ ಕಾರಣಗಳ ಮೇಲೆ ಎಂದರೆ:–

(1) ಒಂದು ಸಂಸ್ಥೆಯು, ಸಕ್ಷಮ ಪ್ರಾಧಿಕಾರಕ್ಕೆ ಸುಳ್ಳು ಮಾಹಿತಿಯನ್ನು ನೀಡಿ ಅಲ್ಪಸಂಖ್ಯಾತ ಸ್ಥಾನವನ್ನು ಪಡೆದಿರುವ ಸಂದರ್ಭದಲ್ಲಿ;

(2) 4ನೇ ನಿಯಮದ (2), (3), (4), (5) ಮತು (6)ನೇ ಉಪ–ನಿಯಮಗಳ ಯಾವುದೇ ಉಪಬಂಧಗಳನ್ನು ಉಲ್ಲಂಘಿಸಿರುವ ಸಂದರ್ಭದಲ್ಲಿ;

(3) 'ಬಿ' ನಿಯಮದಡಿಯಲ್ಲಿ ವರದಿಯನ್ನು ಅಥವಾ 9ನೇ ನಿಯಮದ ಅಡಿಯಲ್ಲಿ ವಿವರಪಟ್ಟಿಯನ್ನು ಸಲ್ಲಿಸದಿರುವ ಸಂದರ್ಭದಲ್ಲಿ;

(4) ಸಂಸ್ಥೆಯ ಅಲ್ಪಸಂಖ್ಯಾತ ಸ್ಥಾನದ ಸತ್ಯಶೀಲತೆಗೆ ಸಂಬಂಧಿಸಿದಂತೆ ಅಥವಾ ಸಂಸ್ಥೆಯು, ಸಂಬಂಧಪಟ್ಟ ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ಕಸಿದುಕೊಳ್ಳುವಂಥ ವಂಚನೆಯ ಪ್ರವೇಶಾತಿ ಪ್ರಕ್ರಿಯೆಯನ್ನು ಅಳವಡಿಸಿಕೊಂಡಿದೆ ಎನ್ನುವುದಕ್ಕೆ ಸಂಬಂಧಿಸಿದಂತೆ ಸರ್ಕಾರವು ಯಾವುದೇ ದೂರನ್ನು ಸ್ವೀಕರಿಸಿದ್ದಲ್ಲಿ ಮತ್ತು ವಿಚಾರಣೆಯಿಂದ ಆ ದೂರು ಸತ್ಯವೆಂದು ಕಂಡುಬಂದ ಸಂದರ್ಭದಲ್ಲಿ

– ಯಾವುದೇ ಸಮಯದಲ್ಲಾದರೂ ರದ್ದುಪಡಿಸಬಹುದಾಗಿದೆ.

ಪರಂತು, ಸಕ್ಷಮ ಪ್ರಾಧಿಕಾರವು, ಅಲ್ಪಸಂಖ್ಯಾತ ಸ್ಥಾನದ ಘೋಷಣೆಯನ್ನು ರದ್ದುಮಾಡುವುದಕ್ಕೆ ಸಂಬಂಧಿಸಿದ ಯಾವುದೇ ಆದೇಶವನ್ನು ಹೊರಡಿಸುವುದಕ್ಕೆ ಮೊದಲು, ಅಂಥ ಸಂಸ್ಥೆ ತನ್ನ ಅಹವಾಲನ್ನು ಹೇಳಿಕೊಳ್ಳುವುದಕ್ಕೆ ಒಂದು ಅವಕಾಶ ನೀಡತಕ್ಕದ್ದು.

12. **ಸಕ್ಷಮ ಪ್ರಾಧಿಕಾರದ ಆದೇಶಗಳ ವಿರುದ್ಧ ಮೇಲ್ಮನವಿ ಸಲ್ಲಿಸುವುದು:–** ಕರ್ನಾಟಕದಲ್ಲಿರುವ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಒಂದು ಕಾಲೇಜು ಶಿಕ್ಷಣ ಸಂಸ್ಥೆಗೆ ಅಲ್ಪಸಂಖ್ಯಾತ ಸ್ಥಾನ ನೀಡುವುದನ್ನು ನಿರಾಕರಿಸಿ ಅಥವಾ ಹಾಗೆ ನೀಡಿರುವ ಸ್ಥಾನವನ್ನು ರದ್ದುಪಡಿಸಿ ಹೊರಡಿಸಿದ ಯಾವುದೇ ಆದೇಶ ಅಥವಾ ಈ ನಿಯಮಗಳ ನಿರೂಪಣೆಗಳಿಗನುಸಾರವಾಗಿ ಹೊರಡಿಸಿದ ಯಾವುದೇ ಆದೇಶದ ವಿರುದ್ಧ ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗ, ನವದೆಹಲಿ–ಇಲ್ಲಿಗೆ ಮೇಲ್ಮನವಿ ಸಲ್ಲಿಸಬಹುದಾಗಿದೆ.

13. **ಅಲ್ಪಸಂಖ್ಯಾತ ಸ್ಥಾನದ ಪ್ರಮಾಣಪತ್ರವನ್ನು ನವೀಕರಿಸುವುದಕ್ಕೆ ಸಂಬಂಧಿಸಿದಂತೆ ಅನುಸರಿಸಬೇಕಿರುವ ಕಾರ್ಯವಿಧಾನ:** (1) ಕಾಲೇಜು ಶಿಕ್ಷಣ ಸಂಸ್ಥೆಗಳ ಅಲ್ಪಸಂಖ್ಯಾತ ಸ್ಥಾನದ ಪ್ರಮಾಣಪತ್ರದ ಅವಧಿಯ, ಅದನ್ನು ನೀಡಿದ ದಿನಾಂಕದಿಂದ ಐದು ವರ್ಷಗಳವರೆಗೆ ಅಥವಾ ಸಂದರ್ಭಾನುಸಾರ, ಆಡಳಿತ ಮಂಡಳಿಯ ಬದಲಾವಣೆ ಅಥವಾ ಸ್ಥಾನಾಂತರ ಅಥವಾ ಹೊಸ ಸ್ಥಳದಲ್ಲಿ ರಚನೆ ಮಾಡುವುದು ಇವುಗಳಲ್ಲಿ ಯಾವುದು ಮೊದಲೋ, ಅಲ್ಲಿಯವರೆಗೆ ಊರ್ಜಿತದಲ್ಲಿರತಕ್ಕದ್ದು.

ಆನಂತರ ಆ ಸಂಸ್ಥೆಯು, 5ನೇ ನಿಯಮದಲ್ಲಿ ನಿಗದಿಪಡಿಸಿದ ರೀತಿಯಲ್ಲಿ ಕಾಲಕಾಲಕ್ಕೆ ಸರ್ಕಾರವು ನಿರ್ದಿಷ್ಟಪಡಿಸಬಹುದಾದ ಶುಲ್ಕ ಪಾವತಿಸುವುದರೊಂದಿಗೆ ನವೀಕರಣಕ್ಕೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸತಕ್ಕದ್ದು.

(2) ಆಡಳಿತ ಮಂಡಳಿಯಲ್ಲಿ ಬದಲಾವಣೆಯಾದಾಗ, ಅಥವಾ ಆಡಳಿತ ಮಂಡಳಿಯ ಸ್ಥಾನಾಂತರವಾದಾಗ ಹೊಸ ಆಡಳಿತ ಮಂಡಳಿಯು, ನಿರ್ದೇಶನಾಲಯಕ್ಕೆ ಹೊಸದಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು ನಿರ್ದೇಶನಾಲಯವು, ಈ ಅರ್ಜಿಯನ್ನು ಪರಿಶೋಧನಾ ಸಮಿತಿಗೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಶೇಖರ

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)

ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ)

PR. 424

SC. 300

WOMEN AND CHILD DEVELOPMENT AND EMPOWERMENT OF DIFFERENTLY ABLED AND SENIOR CITIZENS SECRETARIAT

NO. WCD 434 PHP 2014 BENGALURU DATED: 05.06.2015.

NOTIFICATION

In the Schedule of the Sl.No.19 DPAR Notification No. DPAR 21 SRR 2008 Dated: 03/08/2009 for the entries appearing in columns 3,4, & 5 relating to identification of posts for Physically handicapped persons for Recruitment to State Civil Services Group-A & B posts relating to Health and Family Welfare Services Department, the following corresponding entitries shall be substituted with immediate effect.

SL. NO.	NAME OF THE DEPARTMENT	BLINDNES LOW VISION	HEARING IMPAIRMENT	LOCOMOTOR DISABILITY/CEREBRAL PALSY
1	Health & Family Welfare Department	-----	-----	Specialists (General Medicine) (OL, BL)
2	,,	-----	-----	Specialist (Anesthetist) (OL,)
3	,,	-----	-----	Specialist (Pediatric) (OL, BL)
4	,,	-----	Specialist (Skin)	Specialist (Skin) (OL, BL)
5	,,	-----	-----	Specialist (Radiologist) (OL)
6	,,	-----	-----	Specilasist Psychiatrist (OL, BL)
7	,,	-----	General Duty Medical Officer	General Duty Medical Officer (OA & OL)
8	,,	-----	Dental Healath Officer Designated Officer (Food Safety)	Dental Health Officer (OA & OL) Designated Officer (Food Safety (OA & OL)
9	,,	-----		
10	,,	Psychiatric Social Worker (LV)	Psychiatric Social Worker	Psychiatric Social Worker (OL)
11	,,	Psychologist (LV)	Psychologist	Psychologist (OA & OL)
12	,,	Junior Physicist (LV)	Junior Physicist	Junior physicist (OA & OL)
13	,,	Graduate pharmacist (LV)	Graduate Pharmacist	Graduate Pharmacist (OA & OL0
14	,,		Micro Biologist	Micro Biologist (BL & OL)
15	,,		Assistant Entomologist	Assistant Entomologist (OL)
16	,,	Junior Chemist (LV)	Junior Chemist	Junior Chemist (OA, OAL & BL)
17	,,		Junior Food Analyst (Food Safety)	Junior Food Analyst (Food Analyst (Food Safety (OL)

Sl. No. 39 of the Schedule to the Notification No. DPAR 52 SRR 99 Dated 29/11/2002, for the entries appearing in columns 3,4,5,6,7,8, and 9 relating to identification of Posts for physically handicapped persons for Recruitment to State Civil Services Group-C & D Posts Health & Family Welfare Department, the following corresponding entires shall be substituted with immediate effect.

Sl. No.	Name of the Department	Blind	Low Vision	Leprosy Cured	Hearing Imparied	Locomotor Disability	Mentally Ill	Mentally Retarded
1	Health & Family Welfare Department	------	------	-----	Food Safety Officer	Food Safety Officer (OL)	-----	-----

Sl. No.	Name of the Department	Blind	Low Vision	Leprosy Cured	Hearing Imparied	Locomotor Disability	Mentally Ill	Mentally Retarded
2	,,	---	----	----	Service Engineer	Service Engineer (OL)	-----	-----
3	,,	-----	------	----	Health Equipment Officer	Health Equipment Officer (OA, BL & OL	-----	-----
4	,,	FDA/SDA	FDA/SDA		FDA/SDA	FDA/SDA (OA, OL, OAL, BL)	----	-----
5	,,	----	----	----	X-Ray Technician	X-Ray Technician	-----	-----
6	,,	-----	-----	-----	Ophthalmic Officer/Refractionist	Ophthalmic Officer/Refractionist (OL)	---	----
7	,,	-----	------	------	------	Staff Nurse (OL)	-----	-----
8	,,	---	Physiotherapist	----	Physiotherapist	Physiotherapist (BL, OL)	---	----
9	,,	---	Pharmacist	---	----	Pharmacist (BL, OL)	---	----
10	,,	----	------	-------	-------	Junior Lab Technician/Senior Lab Technician	----	-----
11	,,	----	Junior Health Assistant (Health Inspector)		Junior Health Assistant (Health Inspector)	Junior Health Assistant (Health Inspector) (OA & OL)	-----	----
12	,,	-----	Junior Health Assistant (Female) (ANM)	-----	Junior Health Assistant (Female) (ANM)	Junior Health Assistant (Female) (ANM) (OA & OL)	----	-----
13	,,	---	----	---	Medical Record Technician	Medical Record Technician (OA, OAL, BL & OL)	----	----
14	,,	Dietician	Dietician		Dietician	Dietician (OA, BL, & OL)	----	----
15	,,	---	-----	----	Block Health Educator	Block Heath Educator (OA & OL)	----	----
16	,,	----	-----	----	Orthpedic Technician	----	----	----
17	,,	----	-----	----	Dental Mechanic	Dental Mechanic (OL)	-------	------
18	,,	----	----	----	Social Worker	Social Worker (OA, BL & OL)	------	-----

Sl. No.	Name of the Department	Blind	Low Vision	Leprosy Cured	Hearing Imparied	Locomotor Disability	Mentally Ill	Mentally Retarded
19	,,	----	------	-----	Radio grapher	Radiographer OA, BL, & OL)	-----	-----
20	,,	---	Skilled Tradesman	----	Skilled Tradesman	Skilled Tradesman (OL)	--	---
21	,,	----	----	-----	ECG Technician	ECG Technician (OL)	----	----
22	,,	Stenographer	Stenographer	------	------	Stenographer (OL & BL)	---	----
23	,,	-----	------	----	Electrician	Electrician (OL)	--	---
24	,,	Typist	Typist	-----	Typist	Typist (BL & OL)	Typist	----
25	,,	Clerk-Cum Typist	Clerk Cum-Typist	---	Clerk Cum-Typist	Clerk-Cum-typist (BL & OL)	Clerk-Cum-Typist	----
26	,,	Group ``D''	Group ``D''	Group ``D''	Group ``D''	-------	Group ``D''	Group ``D''
27	,,	------	Laboratory Assistant Attender	-----	Laboratory Assistant/Attender	Laboratory Assistant/Attender (OA & OL)	LAboratory Assistant/attender	-----

The Post identified in 2013 Central Gazette of Specialist (General Surgeon), Specialist (OBG), Specialist (Optho), Specialist (Ortho) & Specialist (ENT) has No Equivalent Post proposed in the Health & Family Welfare Department Such post has been exempted

This Order is issued with the Concurrence of DPAR Services Rules-1 vide Order No. DPAR 273 SeNaNi 2013 Dated: 13/03/2015

By Order and in the name of the Governor of Karnataka

JAYALAKSHMI

Under Secretary to Government-2

Department of Women & Child Development & Empowerment of Differently Abled and Senior Citizens

PR. 445

SC. 500

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ನಅಇ 62 ಗುಅಪ್ರಾ 2015, ಬೆಂಗಳೂರು, ದಿನಾಂಕ: 12.05.2015.

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಯುಡಿ 483 ಟಿಟಿಪಿ 92, ದಿನಾಂಕ: 16.01.1993 ರನ್ವಯ ಘೋಷಿಸಲಾದ ಯಾದಗಿರಿ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಯುಡಿ 69 ಟಿಟಿಪಿ 1996, ದಿನಾಂಕ: 01.03.1997ರಲ್ಲಿ ಯಾದಗಿರಿ ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿರುತ್ತದೆ. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಕಲಂ 3(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಧಿಸೂಚನೆ ಸಂ. ನಅಇ 336 ಬೆಂರೂಪ್ರಾ 2014, ದಿನಾಂಕ: 09.02.2015ರಲ್ಲಿ **ಯಾದಗಿರಿ ನಗರಾಭಿವೃದ್ಧಿ ಪ್ರಾಧಿಕಾರವನ್ನು** ಘೋಷಿಸಲಾಗಿದೆ. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಿಗಳ ಅಧಿನಿಯಮ 1987 (1987ರ ಕರ್ನಾಟಕ ಅಧಿನಿಯಮ 34)ರ 3ನೇ ಪ್ರಕರಣದ 4ನೇ ಉಪ ಪ್ರಕರಣದೊಂದಿಗೆ ಓದಿಕೊಳ್ಳಲಾದ 3ನೇ ಪ್ರಕರಣದ 1ನೇ ಉಪ ಪ್ರಕರಣದ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಯಾದಗಿರಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಈ ಕೆಳಕಂಡಂತೆ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ಕೂಡಲೇ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಈ ಮೂಲಕ ನೇಮಿಸಿದೆ.

ಕ್ರ.ಸಂ	ಸದಸ್ಯರುಗಳು	ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಿಗಳ ಕಾಯ್ದೆ	ಸರ್ಕಾರದಿಂದ ನೇಮಿಸಿರುವ ಅಧ್ಯಕ್ಷರು/ಸದಸ್ಯರು
1	ಅಧ್ಯಕ್ಷರು	ಕಲಂ 3(3)a	ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 47 ಗುಅಪ್ರಾ 2015 ದಿನಾಂಕ: 07.04.2015ರ ಆದೇಶದಲ್ಲಿ ಈಗಾಗಲೇ ಅಧ್ಯಕ್ಷರನ್ನು ನೇಮಿಸಲಾಗಿದೆ.
2	ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಸಹಾಯಕ ನಿರ್ದೇಶಕರ ಹುದ್ದೆಯ ಶ್ರೇಣಿಗಿಂತ ಕಡಿಮೆ ಅಲ್ಲದ ಅಧಿಕಾರಿಯು ನಗರ ಯೋಜಕ ಸದಸ್ಯರಾಗಿರತಕ್ಕದ್ದು:	ಕಲಂ 3(3)(b)	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು/ಸದಸ್ಯ ಕಾರ್ಯದರ್ಶಿ, ಹಿಂದಿನ ನಗರ ಯೋಜನಾ ಪ್ರಾಧಿಕಾರ, ಯಾದಗಿರಿ ಇವರನ್ನು ನೇಮಿಸಿದೆ.
3	ಕರ್ನಾಟಕ ಇಂಜಿನಿಯರಿಂಗ್ ಸೇವೆಗೆ ಒಳಪಟ್ಟ ಕಾರ್ಯಪಾಲಕ ಅಭಿಯಂತರರ ಶ್ರೇಣಿಗಿಂತ ಕಡಿಮೆ ಅಲ್ಲದ ಅಧಿಕಾರಿಯು ಅಭಿಯಂತರರಾಗಿರತಕ್ಕದ್ದು:	ಕಲಂ (3)(3)(c)	ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆ ಯಾದಗಿರಿ ಇವರನ್ನು ನೇಮಿಸಿದೆ.
4	ವಿಧಾನಸಭಾ ಸದಸ್ಯರು ಅಥವಾ ವಿಧಾನ ಪರಿಷತ್ತಿನ ಸದಸ್ಯರು	ಕಲಂ 3(3)(d)	ಪೂರ್ಣ ಅಥವಾ ಭಾಗಶ: ನಗರ ಪ್ರದೇಶವನ್ನು ಪ್ರತಿನಿಧಿಸುವ ಕರ್ನಾಟಕ ವಿಧಾನಸಭೆಯ ಸದಸ್ಯರುಗಳು ಮತ್ತು ಸಂಬಂಧಪಟ್ಟ ನಗರ ಪ್ರದೇಶದ ಖಾಯಂ ನಿವಾಸಿಯಾಗಿರುವ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರನ್ನು ನೇಮಿಸಿದೆ.
5	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಪ್ರತಿನಿಧಿ	ಕಲಂ(3)(3)(e)	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಯಾದಗಿರಿ ಇದರ ಒಬ್ಬ ಪ್ರತಿನಿಧಿಯನ್ನು ನೇಮಿಸಿದೆ.
6	ಕರ್ನಾಟಕ ವಿದ್ಯುತ್ ಮಂಡಳಿಯ ಪ್ರತಿನಿಧಿ	ಕಲಂ 3(3)(ಎಫ್)	ಕಲಬುರಗಿ ವಿದ್ಯುತ್ ಸರಬರಾಜು ಕಂಪನಿ, ಯಾದಗಿರಿ ಇದರ ಒಬ್ಬ ಪ್ರತಿನಿಧಿಯನ್ನು ನೇಮಿಸಿದೆ.
7	ಮಹಾನಗರ ಪಾಲಿಕೆಯ ಆಯುಕ್ತರು ಅಥವಾ ನಗರಸಭೆ/ಪುರಸಭೆಯ ಪೌರಾಯುಕ್ತರು ಅಥವಾ ಮುಖ್ಯಾಧಿಕಾರಿ, ಪದನಿಮಿತ್ತ:	ಕಲಂ 3(3)(ಜಿ)	ಪೌರಾಯುಕ್ತರು, ನಗರಸಭೆ, ಯಾದಗಿರಿ (ಪದನಿಮಿತ್ತ) ಇವರನ್ನು ನೇಮಿಸಿದೆ.
8	ಜಿಲ್ಲಾಧಿಕಾರಿಗಳು, ಯಾದಗಿರಿ (ಪದನಿಮಿತ್ತ)	ಕಲಂ 3(3)(ಹೆಚ್)	ಜಿಲ್ಲಾಧಿಕಾರಿಗಳು, ಯಾದಗಿರಿ (ಪದನಿಮಿತ್ತ) ಇವರನ್ನು ನೇಮಿಸಿದೆ
9	ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಒಬ್ಬ ಚುನಾಯಿತ ಸದಸ್ಯರು:	ಕಲಂ 3(3)(ಐ)	ಸರ್ಕಾರದಿಂದ ನೇಮಿಸಲ್ಪಡುವ ಯಾದಗಿರಿ ನಗರಸಭೆಯ ಚುನಾಯಿತ ಸದಸ್ಯರಲ್ಲಿ ಒಬ್ಬರು,
10	ಪ್ರಕರಣಕ್ಕನುಗುಣವಾಗಿ ಸಂಬಂಧಪಟ್ಟ ನಗರ ಪ್ರದೇಶ ವ್ಯಾಪ್ತಿಯ ಪೊಲೀಸ್ ಆಯುಕ್ತರು ಅಥವಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಪದನಿಮಿತ್ತ:	ಕಲಂ 3(3)(ಜೆ)	ಆರಕ್ಷಕ ಅಧೀಕ್ಷಕರು (ಎಸ್.ಪಿ) ಯಾದಗಿರಿ ಜಿಲ್ಲೆ ಇವರನ್ನು ನೇಮಿಸಿದೆ.
11	ಜಿಲ್ಲಾ ಆರೋಗ್ಯಾಧಿಕಾರಿ ಹುದ್ದೆಯ ಶ್ರೇಣಿಗಿಂತ ಕಡಿಮೆ ಇಲ್ಲದ ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಒಬ್ಬ ಅಧಿಕಾರಿ:	ಕಲಂ 3(3)(ಕೆ)	ಜಿಲ್ಲಾ ಆರೋಗ್ಯಾಧಿಕಾರಿಗಳು, ಯಾದಗಿರಿ ಜಿಲ್ಲೆ ಇವರನ್ನು ನೇಮಿಸಿದೆ.

R.N.I. No. KARBIL/2001/47147 POSTAL REGN. No. RNP/KA/BGS/2202/2014-16
Licensed to post without prepayment **WPP No. 297**

ಕ್ರ.ಸಂ	ಸದಸ್ಯರುಗಳು	ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಿಗಳ ಕಾಯ್ದೆ	ಸರ್ಕಾರದಿಂದ ನೇಮಿಸಿರುವ ಅಧ್ಯಕ್ಷರು/ಸದಸ್ಯರು
12	ವಾಸ್ತುಶಾಸ್ತ್ರದಲ್ಲಿ ಅನುಭವ ಹೊಂದಿರುವ ಒಬ್ಬ ವ್ಯಕ್ತಿ:	ಕಲಂ 3(3)(ಎಲ್)	ಸರ್ಕಾರದಿಂದ ನೇಮಿಸಲಾಗುವುದು
13	ಒಬ್ಬರು ಮಹಿಳೆ ಮತ್ತು ಒಬ್ಬರು ಪರಿಶಿಷ್ಠ ಜಾತಿ ಅಥವಾ ಪರಿಶಿಷ್ಠ ಪಂಗಡಕ್ಕೆ ಸೇರಿದವರನ್ನು ಒಳಗೊಂಡಂತೆ ನಾಲ್ಕು ಜನ	ಕಲಂ 3(3)(ಎಮ್)	ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 47 ಗುಅಪ್ರಾ 2015, ದಿನಾಂಕ: 07.04.2015ರ ಆದೇಶದಲ್ಲಿ 4 ಜನ ಸದಸ್ಯರನ್ನು ಈಗಾಗಲೇ ನೇಮಿಸಲಾಗಿದೆ.
14	ಆಯುಕ್ತರು, ಪದನಿಮಿತ್ತ	ಕಲಂ 3(3)(ಎನ್)	'ಎ' ವೃಂದದ ಪದನಿಮಿತ್ತ ಅಧಿಕಾರಿಯನ್ನು ಸರ್ಕಾರದಿಂದ ನೇಮಿಸುವವರೆಗೆ ಪ್ರಾಧಿಕಾರದ ನಗರ ಯೋಜನಾ ಸದಸ್ಯರನ್ನು ಯಾದಗಿರಿ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರ ಹುದ್ದೆಯಲ್ಲಿ ಅಧಿಕ ಪ್ರಭಾರದಲ್ಲಿಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ವಿ. ರಾಜೇಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ

ನಗರಾಭಿವೃದ್ಧಿ ಇಲಾಖೆ

PR. 403

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59